**ಓ.ಎಸ್ ನಂ. 81 /2021 ಡಿ. ಡಬ್ಲ್ಯೂ-1 (ರವಿ ಬಾಬು)**

**ಸಾಕ್ಷಿಯನ್ನು ದಿನಾಂಕಃ 20.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ್ ಎಂ ಎಂ ವಕೀಲರಿಂದಃ**

ವಾದಿಗಳು ನಮ್ಮ ಮೇಲೆ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ವಾದಿ ರವರು ದಾವೆಯನ್ನು ನೊಂದಣಿ ಮಾಡಿರುವ ದಾಖಲಾತಿ ಸುಳ್ಳಿನಿಂದ ಕೂಡಿರುತ್ತದೆ ಮತ್ತು ಅವರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದು ಹೇಳಿ ದಾವಾ ಸಲ್ಲಿಸಿರುತ್ತಾರೆ. 2 ನೇ ಪ್ರತಿವಾದಿ ವೆಂಕಟೇಶ್ ರವರು ನನಗೆ ತಿಳಿದಿರುವುದಿಲ್ಲ. ನನ್ನ ತಂದೆಯವರಿಗೆ ನಾವು 5 ಜನ ಮಕ್ಕಳು. ಅವರಲ್ಲಿ ನಾನು ಮೊದಲನೇಯವನಾಗಿರುತ್ತೇನೆ.

ನಾನು ಎಂ ಎ ಪದವಿಧರನಾಗಿರುತ್ತೇನೆ. ನಾನು ಈಗ ವ್ಯವಸಾಯ ಮಾಡಿಕೊಂಡಿರುತ್ತೇನೆ ಅದರ ಜೊತೆಯಲ್ಲಿ ವ್ಯವಹಾರಗಳ ವ್ಯವಹಾರವನ್ನು ಮಾಡಿಕೊಂಡಿರುತ್ತೇನೆ. ನಾನು ಕೆಮಿಕಲ್ ವ್ಯವಹಾರ ಮಾಡುತ್ತಿರುತ್ತೇನೆ. ನಾನು 40 ವರ್ಷದಿಂದ ಸದರಿ ಕೆಮಿಕಲ್ ವ್ಯವಹಾರ ಮಾಡುತ್ತಿರುತ್ತೇನೆ. ಸದರಿ ವ್ಯವಹಾರದಿಂದ ವಾರ್ಷಿಕ 1 ವರೆ ಕೋಟಿ ಆದಾಯ ಬರುತ್ತದೆ.

ನನ್ನ ತಂದೆ ತಾಯಿ ರವರು ಕೃಷಿ ಕೆಲಸ ಮಾಡಿಕೊಂಡಿದ್ದರು. ವಾದಿ ರವರು ಯಾವ ಸ.ನಂ ಆಸ್ತಿಗೆ ಸಂಬಂದಿಸಿದಂತೆ ದಾವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯು ಸವ್ವೆ ಗ್ರಾಮದಲ್ಲಿ ಇರುತ್ತದೆ. ಸವ್ವೆ ಗ್ರಾಮದ ಇನ್ನೊಂದು ಹೆಸರು ನನಗೆ ತಿಳಿದಿರುವುದಿಲ್ಲ.

ದಾವಾಸ್ತಿಯ ಮೂಲ ಮಾಲೀಕರು 1ನೇ ವಾದಿ ರವರ ಹೆಂಡತಿ ಮತ್ತು ಉಳಿದ ವಾದಿಗಳ ತಾಯಿಯಾಗಿರುತ್ತಾರೆ. ಅವರ ಹೆಸರು ನಿಂಗಮ್ಮ. ಸದರಿ ನಿಂಗಮ್ಮ ನವರಿಗೆ ದಾವಾಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿದ್ದು, ಪುನಃ ಅವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಂಗಮ್ಮ ನವರಿಗೆ ಒಟ್ಟು 3 ಎಕರೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾಸ್ತಿಯು ಯಾವ ಮಣ್ಣಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಕಲ್ಲು ಮತ್ತು ಕೆಂಪು ಮಣ್ಣಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ತಿಯು ಸುಣ್ಣದ ಕಲ್ಲಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು 1995 ರಲ್ಲಿ ಎಕರೆಗೆ ರೂ.10,000/-ಗಳಂತೆ ಖರೀದಿಸಲಾಗಿರುತ್ತದೆ. ನನಗೆ ಯಾವುದೇ ಕ್ರಯ ಪತ್ರ ಆಗಿಲ್ಲದೆ ಇದ್ದರು ಸಹ ವಾದಿ ರವರ ಆಸ್ತಿಯನ್ನು ಕಬಳಿಸುವ ಸಲುವಾಗಿ ಕ್ರಯಪತ್ರವನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯ ಚಕ್ಕುಬಂದಿ ನನಗೆ ನೆನಪು ಇರುವುದಿಲ್ಲ.

**ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ